# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಜಾವಳಹಳ್ಳ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ
ಅನುಮೋದನೆ ನೀಡುವ ಕುರಿತು.

++ ++ ++

***ಓದಲಾಗಿದೆ*** :-

ಮುಖ್ಯ ಇಂಜಿನಿಯರ್, ಕೆ.ಎನ್.ಎನ್.ಎಲ್., ನೀರಾವರಿ (ಉತ್ತರ), ಬೆಳಗಾಂ, ಇವರ ಪತ್ರ ಸಂಖ್ಯೆ:ಸಿಇಎನ್/ಪಿಎಲ್‌ಡಿ/ಕೆಡಬ್ಲ್ಯೂಟಿ-6/2003 (ವಾಲ್ಯೂಂ-IIಬಿ), ದಿನಾಂಕ:03-08-2003.

***ಪ್ರಸ್ತಾವನೆ*** :-

ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಕೆ.ಎನ್.ಎನ್.ಎಲ್., ನೀರಾವರಿ (ಉತ್ತರ), ಬೆಳಗಾಂ, ರವರು ಜಾವಳಹಳ್ಳ ಏತ ನೀರಾವರಿ ಯೋಜನೆಯ ವಿವರವಾದ ಯೋಜನಾವರದಿಯನ್ನು ರೂ.333 ಲಕ್ಷಗಳಿಗೆ ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಯೋಜನೆಯಡಿ 0.29 ಟಿ.ಎಂ.ಸಿ., ನೀರನ್ನು ಜಾವಳಹಳ್ಳದಿಂದ ನೀರನೆತ್ತಿ ಮಲಪ್ರಭಾ ಬಲದಂಡೆ ಕಾಲುವೆಯಡಿ ನರಗುಂದ ಶಾಖಾ ಕಾಲುವೆಯ ಶಿರಸಿಂಗಿ ವಿತರಣಾ ನಾಲೆಯ ನೀರಿನ ಕೊರತೆಯನ್ನು ಅನುಭವಿಸುತ್ತಿರುವ ಅಂತಿಮ ಭಾಗದ ಸುಮಾರು 4,736 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಒದಗಿಸಲು ಉದ್ದೇಶಿಸಿದೆ ರೂ.333 ಲಕ್ಷಗಳ ಅಂದಾಜಿನಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಮುಖ್ಯ ಇಂಜಿನಿಯರ್‌ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2. ಪ್ರಸ್ತಾವನೆಯನ್ನು ಸರ್ಕಾರ ಮಟ್ಟದಲ್ಲಿ ಪರಿಶೀಲಿಸಿದ್ದು, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಜಸಂಇ 03 ಎನ್‌ಎಎನ್ 1995, ಬೆಂಗಳೂರು, ದಿನಾಂಕ:23-08-03.</u>

ಜಾವಳಹಳ್ಳ ಏತ ನೀರಾವರಿ ಯೋಜನೆಯ ರೂ.333 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

........2....

2. ಈ ಯೋಜನೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕೈಗೆತ್ತಿಕೊಳ್ಳಲು ಹಸ್ತಾಂತರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಶ್ರೀಧರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ವಿ.ಬ್ಯಾ.ಯೋ.).

ಗೆ

1) ಮಹಾಲೇಖಪಾಲರು (ಲೆಕ್ಕ ಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4) ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5) ಮುಖ್ಯ ಇಂಜಿನಿಯರ್, ಕೆ.ಎನ್.ಎನ್.ಎಲ್., ನೀರಾವರಿ (ಉತ್ತರ), ಬೆಳಗಾಂ.
6) ಸರ್ಕಾರದ ಉಪ ಕಾರ್ಯದರ್ಶಿಗಳು, ಕ್ಯಾಬಿನೆಟ್ ವ್ಯವಹಾರಗಳು, ವಿಧಾನಸೌಧ, ಬೆಂಗಳೂರು.
7) ವಿಶೇಷ ಕರ್ತವ್ಯಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ಬೆಂಗಳೂರು.
8) ಹೆಚ್ಚಿನ ಪ್ರತಿ/ಬಿಡಿ ಪ್ರತಿ.

* * * * *